# ಕುರಿಂಗಲ್ಲು ಸೂಜಿಗಲ್ಲು

ಪ್ರಸಾದ್ ಶೆಣೈ ಆರ್.ಕೆ.

ನಾವು ಒಂದಿಷ್ಟು ಚಾರಣಾಸಕ್ತರು ಆ ಬೆಳಗ್ಗೆ ಕಾಡಿನ ಗಾಢವಾದ ದಾರಿಯನ್ನು ಬಳಸಿ ಕುರಿಂಗಲ್ಲು ಬೆಟ್ಟಕ್ಕೆ ಹೋಗುವುದೆಂದು ನಿರ್ಧರಿಸಿದೆವು. ಬೆಟ್ಟದ ತಪ್ಪಲಿಗೆ ಕರೆದೊಯ್ಯುವ ಈ ಸುತ್ತು ಬಳಸು ದಾರಿಯಲ್ಲಿ ಸಾಗುವುದು ತುಂಬಾ ತ್ರಾಸವಾದರೂ ಈ ದಾರಿಯಲ್ಲಿ ಸಾಗುವುದು ಒಂಥರಾ ಮಜವೆಂದು ನಿರ್ಧರಿಸಿ ಆ ಬೆಳಗ್ಗೆ ಕಾರ್ಕಳ ತಾಲೂಕಿನ ಚಂದದ ಊರಾದ ಮಾಳಕ್ಕೆ ಬಂದು, ಅಲ್ಲಿಂದ ಆ ದುರ್ಗಮ ಕಾಡಿನ ದಾರಿಯನ್ನು ಹಿಡಿದು ಕುರಿಂಗೆಲ್ಲು ಬೆಟ್ಟಕ್ಕೆ ಪಯಣ ಶುರುಮಾಡಿದ್ದೆವು.

ಮಾಳ ಜಲಪಾತ, ಕಾಡಿನಲ್ಲಿ ಧಾರೆ ಧಾರೆಯಾಗಿ ಬೀಳುತ್ತಿರುವ ಸದ್ದು, ಎಷ್ಟೋ ದೂರದಲ್ಲಿ ಗಾಳಿಯೊಂದು ಸುಯ್ಯನೇ ಬೀಸಿ ನಮಗೆ ಹತ್ತಿರವಾಗುತ್ತಿರುವ ಸದ್ದು, ಯಾವ್ಯಾವುದೋ ಜಾತಿಯ ಹಕ್ಕಿಗಳೆಲ್ಲವೂ ನಮ್ಮ ಹೆಜ್ಜೆ ಸಪ್ಪಳ ಕೇಳಿ ಗಾಬರಿಯಾಗಿ ಹಾರಿ ದೂರದಿಗಂತದಲ್ಲಿ ತೇಲಿ ಹೋದ ಸದ್ದು, ಎಲ್ಲವೂ ಕೇಳುತ್ತ ಕೇಳುತ್ತ, ನಮಗೆ ಮುತ್ತು ಕೊಡುವಂತೆ ಹಾರಿಹೋಗುವ ಪಾತರಗಿತ್ತಿಗಳನ್ನು, ಮಂಜಿನ ಮುದ್ದೆಯ ನಡುವೆ ಬಲೆ ಹೆಣೆಯುತ್ತಿರುವ ಜೇಡದ ಸಂಸಾರವನ್ನು, 'ನನ್ನನ್ನು ಹುಡುಕಲು ನಿಮಗೆ ಖಂಡಿತ ಸಾಧ್ಯವಿಲ್ಲ, ಈಗ ಹುಡುಕಿ ನೋಡುವ' ಅಂತ ಕಣ್ಣಾಮುಚ್ಚಾಲೆಯಾಡುತ್ತ ತನ್ನದೇ ಬಣ್ಣದ ಹುಲ್ಲಿನ ರಾಶಿಯಲ್ಲಿ ಮರೆಯಾಗುತ್ತಿರುವ ಹಸಿರುಹಾವು, ಹಸುರು ಮಿಡತೆಗಳನ್ನು ನೋಡುತ್ತ ನಾವು ಬೆಟ್ಟದ ತಪ್ಪಲನ್ನು ಕಾಣಲು ಹವಣಿಸುತ್ತಿದ್ದೆವು.

ಕಾಡು ಬೆಳಗಿತು; ದಾರಿ ಸಾಗಿತು

ಮೊದಲು ಪೊದೆಪೊದೆಯಂತೆ ಕಾಣುತ್ತಿದ್ದ ದಾರಿ, ಕೊನೆಕೊನೆಗೆ ದಟ್ಟ ಕಾಡಿಗೆ ಕರೆದೊಯ್ಯುತ್ತಲೇ ಇತ್ತು. ಆಗಷ್ಟೇ ಚಳಿಯ ಹಾಸಿಗೆಯಿಂದ ಎದ್ದ ಸೂರ್ಯನ ಎಳೆ ಎಳೆ ಬಿಸಿಲು, ಕತ್ತಲ ಕಾಡಿನ ಮರಗಳೆಡೆಗಳಿಂದ ಒಂದೇ ಸಮನೆ ಇಣುಕಲು ಶುರಮಾಡಿದವು. ಒಮ್ಮೆಲೇ ಮಬ್ಬುಮಬ್ಬಾಗಿದ್ದ ಕಾಡಿನಲ್ಲಿ ಸೂರ್ಯನ ಬೆಳಕು ಮೂಡಿತು. ದಾರಿಯಲ್ಲಿ ಹಾಸಿಗೆಯಂತೆ ಸುರಿದಿದ್ದ ಬಣ್ಣ ಬಣ್ಣ ತರಗೆಲೆಗಳ ಮೇಲೆ, ತೆಂಗಿನ ಗರಿಗಳ ಮೇಲೆ, ಅಪರೂಪದ ಮರದ ಗೆಲ್ಲುಗಳ ಮೇಲೆ, ನಮ್ಮ ಪಕ್ಕಕ್ಕೆ ಕೇರೆ ಹಾವಿನಂತೆ ನುಸುಳಿಕೊಂಡು ಅವಸರವಸರವಾಗಿ ಹಾಯುತ್ತಿದ್ದ ತೊರೆಯ ನೀರಿನ ಮೇಲೆಲ್ಲ ರವಿರಶ್ಮಿ ಬಿದ್ದು ಬೆಳ್ಳನೆ ಬೆಳಕಾಯಿತು.

ನಾವೀಗ ತುಂಬಾ ಮುಂದೆ ಬಂದಿದ್ದೆವು. ಪುಟ್ಟ ಪುಟ್ಟ ಮನೆಗಳು, ನಾವು ನಡೆಯುತ್ತಾ ಹೋದಂತೆಲ್ಲಾ ದೂರ ದೂರವಾಯಿತು. ಕಾಡಿನ ಅಷ್ಟೂ ಹಕ್ಕಿಗಳಿಗೆ ನೆರಳು ನೀಡುತ್ತಿದ್ದ ದೊಡ್ಡ ಆಲದ ಮರಗಳು, ಅರಳಿಮರಗಳು, ಹಲಸಿನ ಮರಗಳು, ಇನ್ನೂ ಯಾವುದ್ಯಾವುದೋ ಅಪೂರ್ವ ಜಾತಿಯ ಮರಗಳೆಲ್ಲಾ ಉದ್ದಕ್ಕೆ ತಮ್ಮ ಕತ್ತು ಹಿಗ್ಗಿಸಿಕೊಂಡು ಆಕಾಶದತ್ತ ಮಿಕಿಮಿಕಿ ನೋಡುತ್ತಿದ್ದವು. ನಾವು ಮೇಲೆ ಹೋದಂತೆಲ್ಲಾ ಮುಗಿಲಿನೆತ್ತರಕ್ಕೆ ತೇಲಿ ಹೋದಂತೆ ಅನ್ನಿಸುತ್ತಿತ್ತು. ಕಾಡಿನ ಎಳೆಬಿಸಿಲು ರಚ್ಚೆ ಹಿಡಿದ ಮಗುವಿನಂತೆ ಮೆತ್ತಗಾಗಿದ್ದರೂ, ಅದರ ಪ್ರಖರತೆಗೆ ಮೈಯೆಲ್ಲಾ ಆಗಲೇ ಬೆವರಾಗಿತ್ತು. ಕಿತ್ತಳೆ ಸ್ವಾದದ ಒಂದು ಚಾಕೊಲೇಟ್ ಅನ್ನು ಬಾಯಿಗಿಟ್ಟಿದ್ದೇ ಜೀವಕ್ಕೆ ಹಾಯೆನಿಸಿತು.

ನಾವು ಮರದ ನೆರಳಿನಲ್ಲೇ ಕೂತು, ತಂದಿದ್ದ ತಿಂಡಿಯನ್ನು ಹೊಟ್ಟೆಗಿಳಿಸುತ್ತ ಉಪಾಹಾರ ಮುಗಿಸಿದೆವು. ಮತ್ತೆ ನೆರಳಿನಲ್ಲಿ, ಬಿಸಿಲಿನಲ್ಲಿ, ಜಲಪಾತದ ನೀರಿನಲ್ಲಿ ನಮ್ಮ ಪಯಣ ಸಾಗುತ್ತಲೇ ಇತ್ತು.

'ಇನ್ನೂ ಎಷ್ಟು ದೂರವಿದೆ ಕುರಿಂಗೆಲ್' ನಮ್ಮ ಗುಂಪಿನಲ್ಲೊಂದು ದಣಿವಿನ ದನಿ ಕೇಳಿಸಿತು. 'ಎಷ್ಟು ಅಂತ ಹೇಳೋದು – ನಡೆದಷ್ಟೂ ದೂರ, ಕಿ.ಮೀ. ಗೀಮೀ ಅಂದಾಜಾಗಲ್ಲ. ಬೆಟ್ಟದ ನೆತ್ತಿ ತುಂಬಾ ಹತ್ತಿರ ಕಂಡರೆ ಬಂತು ಅಂತ ಅರ್ಥ' ಎಂದಿತು ಮತ್ತೊಂದು ಧ್ವನಿ. ನಮಗೆ ದಾರಿ ತೋರಿಸುವ ಮಲೆಕುಡಿಯ ಗಂಡಸು ಕಾಡಿನಲ್ಲಿ ಕತ್ತಿ ಹಿಡಿದು ದಾರಿ ಮಾಡುತ್ತ, ಮತ್ತಷ್ಟು ದುರ್ಗಮ ಕಾಡಿನಲ್ಲಿ ನಡೆಸಿದರು.

ಎಷ್ಟೋ ದೂರ ಸಾಗಿದ ನಂತರ ನಮ್ಮ ಕಾಲು ನೋಡುತ್ತೇವೆ; ಹಾಳಾದ ಇಂಬಳಗಳು ರಕ್ತವೆಲ್ಲಾ ಗಡದ್ದಾಗಿ ಕುಡಿದು ಉದ್ದನೆಯ ತೇಗು ಬಿಡುತ್ತಿರುವಂತೆ ಕಂಡಿತು. 'ಇರಲಿ ಬಿಡಿ, ಇಂಬಳ ರಕ್ತ ಕುಡಿದರೆ ಏನೂ ಆಗುವುದಿಲ್ಲ. ಅದನ್ನು ತೆಗೆಯಲು ಕೂತರೆ ಇಲ್ಲೇ ಬಾಕಿಯಾಗುತ್ತೇವೆ.

